## ಮಾಂಗಲ್ಯಂ ತಂತುನಾನೇನ ....

ಕಾರ್ಕಳ ಶ್ರೀಮತಿ ಸಾವಿತ್ರಿ ಮತ್ತು ಶ್ರೀ ಮನೋಹರ ರಾವ್ ಇವರ ಪುತ್ರ **ಅಶ್ವಿನ್ ಎಂ. ರಾವ್** ಮತ್ತು ಹಂದಿಗೋಡು ಶ್ರೀಮತಿ ಸೌದಾಮಿನಿ ಮತ್ತು ಶ್ರೀ ರಾಮಚಂದ್ರಯ್ಯ ಇವರ ಪುತ್ರಿ **ಯಶಸ್ವಿನಿ** ಆರ್. ರಾವ್ ಇವರ ವಿವಾಹವು ತಾ.20–11–2008 ರಂದು ಕಳಸದ ಶ್ರೀ ಕಲಶೇಶ್ವರ ಸಭಾಭವನದಲ್ಲಿ ನೆರವೇರಿತು.

□ □ □ □ □

ನಂದಳಿಕೆಯ ಶ್ರೀಮತಿ ಮತ್ತು ಶ್ರೀ ಭುಜಂಗ ರಾವ್ ಇವರ ಪುತ್ರ **ಶ್ರೀಪತಿ** ಮತ್ತು ಉಡುಪಿ ಕುಕ್ಕಿಕಟ್ಟೆಯ ಶ್ರೀಮತಿ ಮತ್ತು ಶ್ರೀ ಯು. ಆರ್. ವಾಸುದೇವ ರಾವ್, ಉಳೂರು ಇವರ ಪುತ್ರಿ **ಸುನೀತ** ಇವರ ವಿವಾಹವು ತಾ.24–11–2008ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

□ □ □ □ □

ಉಡುಪಿ ಚಿಟ್ಪಾಡಿಯ ಶ್ರೀಮತಿ ಮತ್ತು ಶ್ರೀ ಎಸ್. ಸುಂದರ ರಾಯರ ಪುತ್ರ **ವಿನೋದ್** ಮತ್ತು ಸಿಂದಗಿಯ ಶ್ರೀಮತಿ ಮತ್ತು ದಿ. ಡಾ. ಸುರೇಶ್ ವಿ. ಕುಲಕರ್ಣಿಯವರ ಪುತ್ರಿ **ಮಂಜರಿ** ಇವರ ವಿವಾಹವು ತಾ.24–11–2008ರಂದು ಉಡುಪಿ ಚಿಟ್ಪಾಡಿ ಶ್ರೀ ಶಾರದಾಂಬಾ ದೇವಸ್ಥಾನದ ಸಭಾಸದನದಲ್ಲಿ ನೆರವೇರಿತು.

□ □ □ □ □

ಶ್ರೀಮತಿ ಮತ್ತು ಶ್ರೀ ಸುಭಾಶ್ಚಂದ್ರ ರಾವ್ ಅದ್ಯಪಾಡಿ ಇವರ ಪುತ್ರಿ **ಗಾಯತ್ರಿ** ಹಾಗೂ ಕಾಸರಗೋಡಿನ ವರ್ಕಾಡಿ ಸೀತಾರಾಮ ರಾಯರ ಪುತ್ರ **ನಾಗರಾಜ** ಇವರ ವಿವಾಹವು ತಾ.12–12–2008ರಂದು ಅದ್ಯಪಾಡಿ ಶ್ರೀ ಆದಿನಾಥೇಶ್ವರ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ವಿದೇಶ ಪ್ರಯಾಣ

ಮುಂಬೈಯ ಮುಲುಂಡಿನಲ್ಲಿರುವ ಕಡಂದಲೆ ಶ್ರೀಪತಿ ಅಧಿಕಾರಿ ಮತ್ತು ಪತ್ನಿ ಗೀತ ಅಧಿಕಾರಿಯವರು ತಾ.16–12–2008ರಂದು ಕ್ಯಾಲಿಫೋರ್ನಿಯ ಹಾಗೂ ಅಮೇರಿಕಾದ ಪೋರ್ಟ್‌ಲ್ಯಾಂಡ್‌ನಲ್ಲಿರುವ ಬಂಧುಗಳ ಸಂದರ್ಶನಕ್ಕಾಗಿ ತೆರಳಿದ್ದಾರೆ. ಇವರಿಗೆ ಶ್ರೀ ಶಾರದಾ ಬಳಗದ ಶುಭಹಾರೈಕೆಗಳು

## ನಿಧನ

### ಶ್ರೀ ಇನ್ನಪದವು ಶಿವರಾವ್ ಸ್ವರ್ಗಸ್ಥ

ಉಡುಪಿ ಲಕ್ಷ್ಮೀಂದ್ರನಗರದಲ್ಲಿ ವಾಸವಾಗಿದ್ದ ಇನ್ನಪದವು ಶಿವರಾಯರು ಅಲ್ಪಕಾಲದ ಅನಾರೋಗ್ಯ ದಿಂದ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ತಾ.11-12-2008ರಂದು ನಿಧನ ರಾದರು. ಮರಣ ಕಾಲಕ್ಕೆ ಅವರಿಗೆ 80 ವರ್ಷ ವಯಸ್ಸಾಗಿತ್ತು. ಅವರು ಪತ್ನಿ ಮಾಲತಿ ಶಿವರಾವ್, ಪುತ್ರ-ಸಿಂಡಿಕೇಟ್ ಬ್ಯಾಂಕಿನ ಅಧಿಕಾರಿ ಐ.ಪಿ. ಸುಧೀರ್‌ಕುಮಾರ್, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

ಮೃದುಭಾಷಿಯಾಗಿ ಪ್ರೀತಿಪಾತ್ರರಾಗಿದ್ದ ಅವರು ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದ ಅತೀವ ಅಭಿಮಾನಿಗಳಾಗಿದ್ದರು. ಕುಂಜಿಬೆಟ್ಟು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಚಟುವಟಿಕೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

□ □ □ □ □

### ಮಧುಕರ ಧಾರೇಶ್ವರ

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿದ್ದ ಮಧುಕರ ಧಾರೇಶ್ವರರವರು ತಾ.24–11–2008ರಂದು ನಿಧನರಾದರು. ಮೃತರು ಪತ್ನಿ ಓರ್ವ ಪುತ್ರ ಮತ್ತು ಪುತ್ರಿ ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

## ಧನುರ್ಮಾಸದ ವಿಶೇಷ ದಿನಗಳು

| | |
|---|---|
| 15-12-2008 | ಧನು ಸಂಕ್ರಮಣ |
| | ಮೂಲಾ ನಕ್ಷತ್ರಾರಂಭ |
| | ಸಂಕಷ್ಟ ಚತುರ್ಥೀ |
| | ಚಂದ್ರೋದಯ ರಾತ್ರಿ ಗಂ.9.07ಕ್ಕೆ |
| 23-12-2008 | ಸರ್ವೈಕಾದಶೀ |
| 24-12-2008 | ಪ್ರದೋಷಃ |
| 27-12-2008 | ಎಳ್ಳಮಾವಾಸ್ಯಾ |
| 28-12-2008 | ಪೂರ್ವಾಷಾಢಾ ನಕ್ಷತ್ರಾರಂಭ |
| 07-01-2009 | ಸರ್ವೈಕಾದಶೀ |
| 08-01-2009 | ಪ್ರದೋಷಃ |
| | ಮುಕ್ಕೋಟಿ ದ್ವಾದಶೀ |
| 10-01-2009 | ಉತ್ತರಾಷಾಢಾ ನಕ್ಷತ್ರಾರಂಭ |
| 11-01-2009 | ಪೂರ್ಣಿಮಾ |
| 13-01-2009 | ಮಕರ ಸಂಕ್ರಮಣ |

## ಅಭಿನಂದನೆ

### ಕು| ಬಿ.ಎಚ್.ತನ್ವಿರಾವ್ ರಂಗಪ್ರವೇಶ



ಮಂಗಳೂರಿನಲ್ಲಿ ವಾಸ್ತವ್ಯವಿರುವ ಶ್ರೀಯುತ ಹರಿಪ್ರಸಾದ್ ರಾವ್ ಮತ್ತು ಶ್ರೀಮತಿ ಸ್ವರ್ಣಗೌರಿ ರಾವ್ ಇವರ ಪುತ್ರಿ ಕು| ಬಿ.ಎಚ್. ತನ್ವಿರಾವ್ ಇವಳ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವು ಮಂಗಳೂರಿನ ಟೌನ್ ಹಾಲ್‌ನಲ್ಲಿ ನವೆಂಬರ್ 22ರಂದು ಜರುಗಿತು. ಇದೇ ಸಂದರ್ಭದಲ್ಲಿ ಶ್ರೀಯುತ ಬಿ.ಎನ್. ಜಿ.ಕೆ. ರಾವ್ ಇವರ 'ನಲ್ಲೆಗೆ' ಕವನಸಂಕಲನವನ್ನು ಬಿಡುಗಡೆ ಮಾಡಲಾಯಿತು.

ಕು| ಬಿ.ಎಚ್. ತನ್ವಿರಾವ್ ತನ್ನ ಗುರುಗಳಾದ ನೃತ್ಯ ವಿದುಷಿ ಶ್ರೀಮತಿ ಗೀತಾ ಎಸ್., ವಿದುಷಿ ಕು| ರಶ್ಮಿ ಎಸ್. ಹಾಗೂ ಸಂಗೀತ ಗುರುಗಳಾದ ಶ್ರೀಯುತ ಕೆ.ವಿ. ರಾಮನ್ ಇವರಿಗೆ ವಂದನೆಗಳನ್ನು ಅರ್ಪಿಸಿದಳು. ತನ್ನ ನಾಲ್ಕು ವರ್ಷ ವಯಸ್ಸಿನಲ್ಲಿಯೇ ಭರತನಾಟ್ಯವನ್ನು ಆರಂಭಿಸಿದ ತನ್ವಿರಾವ್ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತಾಳೆ. ಅಕ್ಟೋಬರ್ 2007ರಲ್ಲಿ ಝಿ ಟಿವಿಯವರು ನಡೆಸಿದ 'ಪ್ರಚಂಡ ಪುಟಾಣಿ' ಸ್ಪರ್ಧೆಯಲ್ಲಿ ತನ್ವಿ ಅಂತಿಮ ನಾಲ್ಕರ ಘಟ್ಟ ತಲಪಿರುವುದನ್ನು ಈ ಸಂದರ್ಭದಲ್ಲಿ ನೆನೆಪಿಸಿಕೊಳ್ಳಬಹುದು. ತನ್ವಿಯು ಸಂಸ್ಕೃತಿಗೆ ನೀಡಿರುವ ಕೊಡುಗೆಯನ್ನು ಗುರುತಿಸಿ ಈ ವರ್ಷದ ನವೆಂಬರ್ 14ರಂದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ರಾಜ್ಯದ ರಾಜ್ಯಪಾಲರಾದ ಶ್ರೀಯುತ ರಾಮೇಶ್ವರ ಠಾಕೂರ್ ಇವರು ಪ್ರದಾನ ಮಾಡಿದರು. ಇವಳಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

### ಪ್ರತೀಕ್ ಭಂಡಿ ರಾಜ್ಯಮಟ್ಟಕ್ಕೆ ಆಯ್ಕೆ



ಕಾರ್ಕಳದ ಕೆ.ಎಂ.ಇ.ಎಸ್. ಪ್ರೌಢಶಾಲೆ ಕುಕ್ಕುಂದೂರಿನಲ್ಲಿ 10ನೆಯ ತರಗತಿಯ ವಿದ್ಯಾರ್ಥಿ ಪ್ರತೀಕ್ ಭಂಡಿ ಇವರು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಇವರು ಏರ್ಪಡಿಸಿದ ವೈಜ್ಞಾನಿಕ ಕಾರ್ಯಾಗಾರದಲ್ಲಿ ಮಂಡಿಸಿದ ಪ್ರಬಂಧವು ಸತತ 2ನೇ ಬಾರಿಗೆ ಜಿಲ್ಲಾ ಮಟ್ಟದಿಂದ ರಾಜ್ಯಮಟ್ಟಕ್ಕೆ ಆಯ್ಕೆ ಯಾಗಿರುತ್ತದೆ. ಇವರು ಅಂತರಾಷ್ಟ್ರೀಯ ಕ್ರೀಡಾಪಟು, ಜೀವವಿಮಾ ನಿಗಮದ ಹೊಸನಗರ ಶಾಖೆಯಲ್ಲಿ ಸಹಾಯಕ ಅಧಿಕಾರಿಯಾಗಿರುವ ಶ್ರೀ ಪದ್ಮನಾಭ ಭಂಡಿ ಹಾಗೂ ಕೆ.ಎಂ.ಇ.ಎಸ್. ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲೆ ಶ್ರೀಮತಿ ಜ್ಯೋತಿ ಪದ್ಮನಾಭ್ ಇವರ ಸುಪುತ್ರ. ಇವರಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

### ಬಿ. ಸೌರಭ್ ರಾವ್‌ರಿಗೆ ಇನ್ಫೋಸಿಸ್‌ನಲ್ಲಿ ಉದ್ಯೋಗ



ಉಡುಪಿಯ ಬಿ. ಸೌರಭ್ ರಾವ್‌ರಿಗೆ ಇನ್ಫೋಸಿಸ್‌ನಲ್ಲಿ ಉದ್ಯೋಗ ಲಭಿಸಿದೆ. ಇವರು ನಿಟ್ಟೆಯ ತಾಂತ್ರಿಕ ಮಹಾವಿದ್ಯಾಲಯ (NMAMIT)ದಿಂದ ಬಿ.ಇ. (ಕಂಪ್ಯೂಟರ್ಸ್) ಪದವಿ ಪಡೆದಿರುತ್ತಾರೆ. ಇವರು ಉಡುಪಿಯ ಬಿ. ಜಯರಾಮ ರಾವ್ (ಸಿಂಡಿಕೇಟ್ ಬ್ಯಾಂಕಿನ ಉದ್ಯೋಗಿ) ಮತ್ತು ಶ್ರೀಮತಿ ವೀಣಾ ಜಯರಾಮ ರಾವ್(ಸ್ಟೇಟ್ ಬ್ಯಾಂಕಿನಲ್ಲಿ ಉದ್ಯೋಗಿ) ಇವರ ಪುತ್ರ. ಸೌರಭ್‌ರಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

### ಪದೋನ್ನತಿ-ಪದ್ಮನಾಭ ಭಂಡಿ



ಭಾರತೀಯ ಜೀವವಿಮಾ ನಿಗಮದ ಕಾರ್ಕಳ ಶಾಖೆಯ ಉದ್ಯೋಗಿ ಪೆರ್ಡೂರು ಪದ್ಮನಾಭ ಭಂಡಿಯವರು ಇತ್ತೀಚೆಗೆ ಧಾರವಾಡದಲ್ಲಿ ನಡೆದ ಅಖಿಲ ಭಾರತೀಯ ಜೀವವಿಮಾ ನಿಗಮದ ದಕ್ಷಿಣ ಮಧ್ಯವಲಯದ ಕ್ರೀಡಾಕೂಟದಲ್ಲಿ ಭಾಗವಹಿಸಿ 110ಮೀ ಹರ್ಡಲ್‌ನಲ್ಲಿ ಚಿನ್ನದ ಪದಕ ಪಡೆದು ಡಿಸೆಂಬರ್ ತಿಂಗಳ 18-22ರ ವರೆಗೆ ಪೂನಾದಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ. ಈಗಾಗಲೇ ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿರುವ ಪದ್ಮನಾಭ ಭಂಡಿಯವರಿಗೆ ಕ್ರೀಡಾರಂಗದಲ್ಲಿ ಇನ್ನೂ ಹೆಚ್ಚಿನ ಯಶಸ್ಸನ್ನು ಶ್ರೀ ಶಾರದಾ ಹಾರೈಸುತ್ತದೆ.

ಶ್ರೀಯುತ ಪದ್ಮನಾಭ ಭಂಡಿಯವರು ಇತ್ತೀಚೆಗೆ ಅಧಿಕಾರಿಯಾಗಿ ಪದೋನ್ನತಿ ಹೊಂದಿ ಹೊಸನಗರ ಶಾಖೆಗೆ ವರ್ಗಾಯಿಸಲ್ಪಟ್ಟಿದ್ದಾರೆ. ಅವರಿಗೆ ಹಾರ್ದಿಕ ಅಭಿನಂದನೆಗಳು.

## ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.15-12-2008ರಂದು ಮತ್ತು 14-01-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ

**ಜನವರಿ ತಿಂಗಳಲ್ಲಿ**

**ತಾ.10-01-2009ರ ಶನಿವಾರ**

ಸಂಜೆ ಗಂಟೆ 5-30ರಿಂದ

## ಗಮಕವಾಚನ-ಪ್ರವಚನ

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನ'ಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

**- ಶ್ರೀಶಾರದಾ ದೇವಸ್ಥಾನ ವೇದಿಕೆ**

## ವೈದ್ಯಕೀಯ ವೇದಿಕೆ–ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ ಕೇಳಿದವರು : ವೈ. ಮೋಹನ ರಾವ್.** **ಉತ್ತರಿಸಿದವರು : ಡಾ| ವೈ. ಸುದರ್ಶನ್ ರಾವ್.**

**ಪ್ರಶ್ನೆ : ನನ್ನ ಸಂಬಂಧಿಕರೊಬ್ಬರಿಗೆ ಪದೇ ಪದೇ ಎದೆನೋವು ಬರುತ್ತಿದ್ದು ಅವರಿಗೆ ಬೈಪಾಸು ಸರ್ಜರಿ ಮಾಡಿಸಿಕೊಳ್ಳಲು ವೈದ್ಯರು ಶಿಫಾರಸು ಮಾಡಿದ್ದಾರೆ. ರೋಗಿಯೊಬ್ಬನು ಬೈಪಾಸು ಸರ್ಜರಿ ಮಾಡಿಸಿಕೊಳ್ಳಲೇಬೇಕಾದ ಸಂದರ್ಭ ಯಾವುದು? ಸರ್ಜರಿ ಮಾಡಿಸಿಕೊಳ್ಳುವುದರಿಂದ ರೋಗಿಗಾಗುವ ಪ್ರಯೋಜನವೇನು? ಸರ್ಜರಿಯಿಂದ ರೋಗಿಗೆ ಮುಂದೇನಾದರೂ ತೊಂದರೆಯಾಗಬಹುದೇ?**

ಉತ್ತರ : ಮನುಷ್ಯನ ಹೃದಯಕ್ಕೆ ಕೊರೊನರಿ ಎಂಬ ಹೆಸರಿನ ಎರಡು ರಕ್ತನಾಳಗಳ ಮೂಲಕ ನಿರಂತರವಾಗಿ ರಕ್ತ ಪರಿಚಲನೆ ನಡೆಯುತ್ತಿರುವುದು. ಈ ಎರಡು ರಕ್ತನಾಳಗಳು ಶೇಕಡಾ 70ರಷ್ಟು ಮುಚ್ಚಿಕೊಂಡಾಗ ಮಾತ್ರ ಹೃದಯಕ್ಕೆ ರಕ್ತಪರಿಚಲನೆ ಕಡಿಮೆಯಾದ ಚಿಹ್ನೆಗಳು ಕಾಣಿಸಿಕೊಳ್ಳುವವು. ರಕ್ತ ಪರಿಚಲನೆ ಸರಿಯಾಗಿ ನಡೆಯುವಂತೆ ಮಾಡಲು ಮೂರು ತರಹದ ಚಿಕಿತ್ಸಾ ವಿಧಾನಗಳಿವೆ.

* ಔಷಧಿಗಳ ಮೂಲಕ ಹೃದಯದ ರಕ್ತನಾಳಗಳನ್ನು ಹಿಗ್ಗಿಸಿ, ರಕ್ತವನ್ನು ತೆಳ್ಳಗಾಗಿಸಿ, ಈಗಿರುವ ನಾಳಗಳಲ್ಲೇ ಇನ್ನೂ ಹೆಚ್ಚು ರಕ್ತ ಹರಿಯುವಂತೆ ಮಾಡುವುದು. (ಮೆಡಿಕಲ್ ಟ್ರೀಟ್‌ಮೆಂಟ್)
* ಶಸ್ತ್ರಚಿಕಿತ್ಸೆಯ ಮೂಲಕ ಉತ್ತಮ ರಕ್ತ ಸಂಚಾರವಿರುವ ರಕ್ತನಾಳವನ್ನು ಕಡಿಮೆ ರಕ್ತ ಸಂಚಾರವಿರುವ ನಾಳಕ್ಕೆ ಕೃತಕವಾಗಿ ಜೋಡಿಸಿ ಹೃದಯದ ರಕ್ತ ಪರಿಚಲನೆಯನ್ನು ಹೆಚ್ಚಿಸುವುದು. (ಬೈಪಾಸು ಸರ್ಜರಿ)
* ರಕ್ತನಾಳವು ಮುಚ್ಚಿಹೋಗಿರುವ ಜಾಗವನ್ನು ಹಿಗ್ಗಿಸಿ, ಅಗಲಗೊಳಿಸುವುದು. (ಆ್ಯಂಜಿಯೋಪ್ಲಾಸ್ಟಿ)

ಈ ಎಲ್ಲಾ ಚಿಕಿತ್ಸಾವಿಧಾನಗಳೊಳಗೆ ಶಸ್ತ್ರಚಿಕಿತ್ಸೆಯ ಪರಿಣಾಮ ಉತ್ತಮವಾದದ್ದು.

ಒಂದು ವೇಳೆ ರೋಗಿಯು ಮಾನಸಿಕವಾಗಿ, ಆರ್ಥಿಕವಾಗಿ, ದೈಹಿಕವಾಗಿ ಸದೃಢನಾಗಿದ್ದಲ್ಲಿ, ಕೆಲವು ವೈದ್ಯರೇ ನಿರ್ಧರಿಸಬೇಕಾದ ಸಂದರ್ಭಗಳನ್ನು ಹೊರತುಪಡಿಸಿ, ಬೈಪಾಸು ಸರ್ಜರಿಯೇ ಉತ್ತಮ ಆಯ್ಕೆ. ಆದರೂ ಕೆಲವು ಆಯ್ದ ರೋಗಿಗಳಲ್ಲಿ ಆ್ಯಂಜಿಯೋಪ್ಲಾಸ್ಟಿ ಚಿಕಿತ್ಸೆಯು ಶಸ್ತ್ರ ಚಿಕಿತ್ಸೆಯಷ್ಟೇ ಉತ್ತಮ ಪರಿಣಾಮ ಬೀರುತ್ತದೆ.

ಸರ್ಜರಿ ಮಾಡಿಸಿಕೊಳ್ಳುವುದರಿಂದ ಹೆಚ್ಚಿನ ರೋಗಿಗಳಲ್ಲಿ (60%) ಎದೆನೋವು ಇತ್ಯಾದಿ ಚಿಹ್ನೆಗಳು ಮಾಯವಾದರೆ ಕೆಲವರಲ್ಲಿ (30%) ಖಾಯಿಲೆಯ ತೀವ್ರತೆ ಕಡಿಮೆಯಾಗುವುದು. ತಮ್ಮ ದಿನಚರಿಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಬಹುದು. ಹೃದಯಾಘಾತವಾಗುವ ಸಾಧ್ಯತೆ ಕಡಿಮೆಯಾಗಿ ಆಯುಷ್ಯ ವೃದ್ಧಿಯಾಗುವುದು. ಅಷ್ಟೇ ಅಲ್ಲದೆ ನುಂಗಬೇಕಾದ ಮಾತ್ರೆಗಳ ಸಂಖ್ಯೆಯೂ ಕಡಿಮೆಯಾಗುವುದು. ಶಸ್ತ್ರ ಚಿಕಿತ್ಸೆಯ ಕೆಲವು ತೊಂದರೆಗಳು ಈ ರೀತಿ ಇವೆ.

* ಇದೊಂದು ಮೇಜರ್ ಸರ್ಜರಿ, ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರೋಗಿಯನ್ನು ಕಳಕೊಳ್ಳಬಹುದಾದ ಸಾಧ್ಯತೆ ಶೇಕಡಾ 1ರಷ್ಟು (ಇದು ಕೆಲವು ರೋಗಿಗಳಲ್ಲಿ ಇನ್ನೂ ಹೆಚ್ಚಿರಬಹುದು) ಇದೆ.
* ಶಸ್ತ್ರಚಿಕಿತ್ಸೆ ನಡೆಸಿದ ಸ್ಥಳದಲ್ಲಿ ಅಲ್ಪಸ್ವಲ್ಪ ನೋವು ತುಂಬಾ ಸಮಯ ಇರಬಹುದು.
* ಶಸ್ತ್ರಚಿಕಿತ್ಸೆಯ ನಂತರವೂ ರಕ್ತಪರಿಚಲನೆ ಉತ್ತಮವಾಗದೆ ಇರಬಹುದು.
* ಸ್ವಲ್ಪ ಕಾಲದ ನಂತರ ಬೈಪಾಸು ಮಾಡಿದ ನಾಳಗಳೂ ಮುಚ್ಚಿಹೋಗಬಹುದು.

ವೈದ್ಯಕೀಯ ವಿಜ್ಞಾನ ಮುಂದುವರಿದಿರುವುದರಿಂದ ಹೃದಯದ ಶಸ್ತ್ರಚಿಕಿತ್ಸೆಯು ಸುಲಭವೂ, ಸುರಕ್ಷಿತವೂ ಆಗಿರುವ ಹೊಸಹೊಸ ವಿಧಾನಗಳ ಆವಿಷ್ಕಾರಗಳಾಗಿವೆ. ಹಾಗಾಗಿ ಇತ್ತೀಚೆಗೆ ರೋಗಿಗಳಿಗೆ ಬೈಪಾಸು ಸರ್ಜರಿ ಮಾಡಿಸಿಕೊಳ್ಳುವಂತೆ ವೈದ್ಯರು ಸಲಹೆ ನೀಡುತ್ತಿರುವುದು ಸಾಮಾನ್ಯವಾಗಿದೆ.